# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 299 | Pages. 2 | Date: 21-10-2025, TUESDAY | RNI NO: KARKAN/2024/89601 | Kannada Daily

ಸಂಪುಟ : 01 - ಸಂಚಿಕೆ : 299 - ಪುಟಗಳು : 2 | 21-10-2025 ಮಂಗಳವಾರ | Ph: 8762954248 | ದರ : ₹1


# ಮಾನ ಮರ್ಯಾದೆ ಇದ್ದರೆ ಶಾಸಕರಿಗೆ ಅನುದಾನ ನೀಡಿ

## ಸರ್ಕಾರಕ್ಕೆ ವಿಪಕ್ಷ ನಾಯಕ ಆರ್. ಅಶೋಕ್ ಚಾಟಿ | ಎರಡೂವರೆ ವರ್ಷದಿಂದ ಅಭಿವೃದ್ಧಿ ಶೂನ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಾನ ಮರ್ಯಾದೆ ಇದ್ದರೆ ಶಾಸಕರಿಗೆ ಅನುದಾನ ಬಿಡುಗಡೆ ಮಾಡಲಿ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಹಿಂದಿನ ಸರ್ಕಾರದ ಅವಧಿಯಲ್ಲಿ ಶಾಸಕರಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ. ಇವರೆಷ್ಟು ಮಾಡಿದ್ದಾರೆ ಎಂಬುದರ ಬಗ್ಗೆ ಶ್ವೇತ ಪತ್ರ ಹೊರಡಿಸಲಿ, ಇವರು ಘೋಷಣೆ ಮಾಡಿರುವ 25 ಕೋಟಿ ರೂ. ಇನ್ನೂ 25 ಕಿ.ಮೀ ದೂರ ಎಂದು ವ್ಯಂಗ್ಯವಾಡಿದರು.

ಈಗ ಖಜಾನೆಯಲ್ಲಿ ದುಡ್ಡಿಲ್ಲ. ನವೆಂಬರ್, ಡಿಸೆಂಬರ್‌ಗೆ ಹೊಸ ಸಿಎಂ ಬಂದರೆ ಆಗ ನೋಡಬೇಕು.

ರಾಜ್ಯದಲ್ಲಿ ಕಳೆದ ಎರಡೂವರೆ ವರ್ಷಗಳಿಂದ ಏನನ್ನೂ ಮಾಡದ ಕಾಂಗ್ರೆಸ್ ಸರ್ಕಾರ, ಇದೀಗ ಆರ್ ಎಸ್‌ಎಸ್ ಹೆಸರು ಬಳಸಿ ತನ್ನ ಹುಳುಕು ಮುಚ್ಚಲು ಹೊರಟಿದೆ ಎಂದು ಆರೋಪ ಮಾಡಿದರು.



ಎಲ್ಲವನ್ನೂ ಮುಚ್ಚಿಕೊಳ್ಳಲು ಆರ್ ಎಸ್‌ಎಸ್ ಹೆಸರು ಹೇಳಿ ಡೈವೋರ್ಟ್ ಮಾಡಲು ಹುನ್ನಾರ ಮಾಡುತ್ತಿದೆ ಎಂದು ಕಿಡಿಕಾರಿದರು.

ಎಸ್‌ಡಿಆರ್‌ಎಫ್ ಅಡಿ 384 ಕೋಟಿ ಕೇಂದ್ರ ಪರಿಹಾರ ಕಡಿಮೆ ಆಗಲಿಲ್ಲವೇ ಎಂಬ ಪ್ರಶ್ನೆಗೆ ಮಹಾರಾಷ್ಟ್ರದಿಂದಲೇ ನಮಗೆ ಹಾನಿಯಾಗಿರುವುದು. ಅದಕ್ಕೆ ಆ ರಾಜ್ಯಕ್ಕೆ ಹೆಚ್ಚು, ನಮಗೆ ಕಡಿಮೆ. ಅದರೂ ಕೇಂದ್ರ ತಂಡದ ಪರಿಶೀಲಿಸಿ ವರದಿ ಆಧರಿಸಿ ಪರಿಹಾರ ಹಣ ಬಿಡುಗಡೆ ಮಾಡಲಾಗಿದೆ ಎಂದರು.

> ಡಿಸಿಎಂ ಡಿಕೆಶಿ ಅವರಿಗೆ ಬಿಜೆಪಿಯಿಂದ ಯಾರು ಕರೆ ಮಾಡಿದರು ಎಂಬುದನ್ನು ಹೇಳಬೇಕು. ಕೇವಲ ಗಾಳಿಯಲ್ಲಿ ಗುಂಡು ಹೊಡೆಯುವುದು ಬೇಡ. ಧೈರ್ಯ ಇದ್ದರೆ ಸಾಕ್ಷಿ ಇದ್ದರೆ ಹೇಳಿ, ಡಿಕೆಶಿ ಸುಳ್ಳು ಹೇಳುತ್ತಿದ್ದಾರೆ. ಯಾವ ನಂಬರ್‌ನಿಂದ ಕರೆ ಬಂದಿತ್ತು ಎಂಬುದನ್ನು ಬಹಿರಂಗ ಪಡಿಸಲಿ.
>
> **– ಆರ್.ಅಶೋಕ್, ವಿಪಕ್ಷ ನಾಯಕ**

ಹಿಂದೆ ಮನಮೋಹನ್ ಸಿಂಗ್ ಸರ್ಕಾರ ಇದ್ದಾಗ ಎಷ್ಟು ಕೊಟ್ಟಿದ್ದರು ಎಂದು ಹೇಳಲಿ, ಒಂದೇ ಒಂದು ಸರ್ವಪಕ್ಷ ಸಭೆ ಕರೆದಿಲ್ಲ, ಸಿಎಂ ಜಿಎಸ್‌ಟಿ ಮೀಟಿಂಗ್‌ಗೆ ಹೋಗಿಲ್ಲ ಎಂದು ಲೇವಡಿ ಮಾಡಿದರು. ಹೆಚ್ಚು ಪರಿಹಾರ ಬೇಕಿದ್ದರೆ ಅವರ 9 ಜನ ಸಂಸದರು ಕೇಳಲಿ ಎಂದರು.

ಸಿದ್ದರಾಮಯ್ಯ ಅವರದು ಎಡಬಿಡಂಗಿ ಸರ್ಕಾರ, ಬೇಕಾಬಿಟ್ಟಿ ಜಾತಿಗಣತಿ ಮಾಡುತ್ತಿದೆ. ನಾವು ಆರಂಭದಲ್ಲೇ ಹೆಚ್ಚು ಸಮಯ ನಿಗದಿ ಪಡಿಸಿ ಎಂದೆವು, ಕೇವಲ 15 ದಿನದಲ್ಲಿ ಮುಗಿಸುತ್ತೇವೆ ಎಂದವರು ಈಗ ಎರಡು ಬಾರಿ ಮುಂದೂಡಿಕೆ ಮಾಡಿರುವುದೇಕೆ ಎಂದು ಪ್ರಶ್ನಿಸಿದರು.

ರಾಜ್ಯದ ಎಷ್ಟೋ ಕಡೆ ಸಮೀಕ್ಷೆ ಶೇ.70 ರಷ್ಟು ಮುಗಿದಿಲ್ಲ.

ಅದೇ ಕಾರಣಕ್ಕೆ ಮುಂದೂಡಿದ್ದಾರೆ. ಶೇ.90 ಭಾಗ ಮುಗಿದಿದೆ ಎಂಬುದು ಸತ್ಯಕ್ಕೆ ದೂರವಾದ ಸಂಗತಿ ಎಂದ ಅಶೋಕ್, ಸಮೀಕ್ಷೆ ಬಗ್ಗೆ ಮಾತನಾಡಿದರೆ ಧಮ್ಕಿ ಹಾಕುತ್ತಿದ್ದಾರೆ. ನಾನು ಕೇವಲ 4 ಕಾಲಂ ಅಂದರೆ ಹೆಸರು, ಜಾತಿ, ಧರ್ಮ ಕಾಲಂ ಭರ್ತಿ ಮಾಡಿದ್ದೇನೆ ಅಷ್ಟೆ. 60 ಪ್ರಶ್ನೆ ಅನಗತ್ಯ. ಸುಧಾಮೂರ್ತಿ ಸೇರಿ ಯಾರೆಲ್ಲ ರೆಜೆಕ್ಟ್ ಮಾಡಿದ್ದಾರೋ ಅವರಿಗೆ ಧಮ್ಕಿ ಹಾಕುವುದು, ರೌಡಿಸಂ ಮಾಡುವುದು ಸರಿಯೇ ಎಂದು ಪ್ರಶ್ನಿಸಿದರು.

ಗಣತಿ ಸಂಬಂಧ ಹೈಕೋರ್ಟ್ ಇಷ್ಟ ಇದ್ದವರು ಭಾಗವಹಿಸಬಹುದು ಎಂದಿದೆ. ಆದರೆ ಸರ್ಕಾರ ಅದನ್ನು ಉಲ್ಲಂಘಿಸಿದೆ. ಸರ್ಕಾರ ನಡೆಸುತ್ತಿರುವವರು ಬೃಹಸ್ಪತಿಗಳೇ, ಇವರೇನು ಆಗಸದಿಂದ ಉದುರಿದ್ದಾರಾ ಎಂದು ಪ್ರಶ್ನಿಸಿದರು.

ಬೆಂಗಳೂರಿನ ಅನೇಕ ಉದ್ಯಮಿಗಳು ರಸ್ತೆ ವಿಚಾರ ಸಂಬಂಧ ಸರ್ಕಾರಕ್ಕೆ ಛೀಮಾರಿ ಹಾಕಿದ್ದಾರೆ. ಬೆಂಗಳೂರು ಬ್ರಾಂಡ್ ಬೆಂಗಳೂರು ಆಗಬೇಕಿದ್ರೆ, ತೆರಿಗೆ ಪಾವತಿಸಿರುವ ಅವರೂ ಕಾರಣ, ಸರ್ಕಾರ ನಡೆಸುತ್ತಿರುವವರು ಮಾತ್ರವೇ ಅಲ್ಲ, ತೆರಿಗೆ ಕಟ್ಟುವವರು ರಸ್ತೆ ಬೇಕು ಎಂದು ಕೇಳೋದು ತಪ್ಪೇ, ನಮ್ಮ ಸರ್ಕಾರ ಇದ್ದಾಗಲೂ ಕೇಳಿದ್ದರು ಎಂದರು.

ಕಳೆದ ಹಲವು ತಿಂಗಳಿಂದ ಸರ್ಕಾರಿ ನೌಕರರಿಗೆ ಸರಿಯಾಗಿ ಸಂಬಳ ಕೊಡುತ್ತಿಲ್ಲ. ಗುತ್ತಿಗೆದಾರರು 33 ಸಾವಿರ ಕೋಟಿ ರೂ. ಬಾಕಿ ಕೊಡಬೇಕು ಎಂದು ಗಡುವು ನೀಡಿದ್ದಾರೆ. ಆಗ ಬಿಜೆಪಿಯವರು ಬಾಕಿ ಉಳಿಸಿ ಹೋಗಿದ್ದಾರೆ ಎನ್ನುತ್ತಿದ್ದರು. ಬಾಕಿ ಮಾತೆತ್ತಿದರೆ ಬಿಜೆಪಿ ಉಳಿಸಿ ಹೋಗಿದೆ ಅಂತಿದ್ದರು. ಬಾಕಿ ವಿವರದ ಬಗ್ಗೆ ಶ್ವೇತಪತ್ರ ಹೊರಡಿಸಲಿ ಎಂದು ಆಗ್ರಹಿಸಿದರು.

### ಬೆಂಗಳೂರು ಮರಳುಗಾಡು

ನಿಮ್ಮ ನಿರ್ಲಕ್ಷ್ಯದಿಂದಲೇ ಅನೇಕ ಕಂಪನಿಗಳು ರಾಜ್ಯದಿಂದ ಹೊರ ಹೋದವು, ಇರುವವರಿಗೆ ಧಮ್ಕಿ ಹಾಕಲಾಗುತ್ತಿದೆ, ಎಲ್ಲರನ್ನೂ ಓಡಿಸಿ ಬೆಂಗಳೂರನ್ನು ಮರಳುಗಾಡು ಮಾಡುತ್ತೀರಾ ಎಂದು ಕಿಡಿ ಕಾರಿದರು. ಮಳೆ ಏನೂ ಈ ಸರ್ಕಾರದ ಅವಧಿಯಲ್ಲಿ ಬರುತ್ತಿಲ್ಲ. ಬರುಡೆ ಬಿಡುವುದನ್ನು ಬಿಟ್ಟು, ಕಂಪನಿಗಳ ಕ್ಷಮೆ ಕೇಳಿ ಎಂದು ಆಗ್ರಹಿಸಿದರು.

### ಆರ್‌ಎಸ್‌ಎಸ್ ನಿಷೇಧ ಬಿಜೆಪಿ ನಿರ್ಧಾರವಲ್ಲ

ಆರ್‌ಎಸ್‌ಎಸ್ ಸರ್ಕಾರಿ ಜಾಗ ಬಳಸದಂತೆ ಹಿಂದೆ ಜಗದೀಶ್ ಶೆಟ್ಟರ್ ಅವರು ಆದೇಶ ಮಾಡಿ ಸಹಿ ಹಾಕಿಲ್ಲ. ಅದು ಕ್ಯಾಬಿನೆಟ್ ಮುಂದೆಯೂ ತೀರ್ಮಾನ ಆಗಿಲ್ಲ. ಮಂತ್ರಿಯೂ ಸಹಿ ಹಾಕಿಲ್ಲ. ಆದೇಶ ಮಾಡಿದ್ದರೆ ದಾಖಲೆ ಕೊಡಿ ಎಂದು ಆಗ್ರಹಿಸಿದ ಅಶೋಕ್, ಆದೇಶದ ಪೂರ್ವಾಪರ ತಿಳಿದುಕೊಳ್ಳುವ ಸಣ್ಣ ಜ್ಞಾನ ಸರ್ಕಾರ ಮಾಡುತ್ತಿರು ವವರಿಗೆ ಇಲ್ಲ ಎಂದು ಲೇವಡಿ ಮಾಡಿದರು. ಆರ್‌ಎಸ್‌ಎಸ್‌ಗೆ ನೂರು ವರ್ಷ ತುಂಬಿದೆ. ತುಂಬಿದೆ. ಅಲ್ಲಿಂದ ಇಲ್ಲದ್ದು ಈಗ ಬಂದಿರುವುದೇಕೆ, ನಮಾಜ್ ಮಾಡಲು ಎಷ್ಟೋ ಕಡೆ ಟ್ರಾಫಿಕ್ ಬಂದ್ ಮಾಡುತ್ತಾರೆ, ಸರ್ಕಾರ ಏನು ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕರಾದ ಸಿಮೆಂಟ್ ಮಂಜು, ಭಾಗೀರಥಿ ಮುರುಳ್ಯ, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಮುಖಂಡರಾದ ಅಮಿತ್, ದೀಪಕ್ ದೊಡ್ಡಯ್ಯ ಇದ್ದರು.

# ಕಬ್ಬಳಿ ಬಸವೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಸಿದ್ಧತೆ

## ನ.1 ರಿಂದ 5ರ ವರೆಗೆ ಅದ್ದೂರಿ ಜಾತ್ರೆ | ಚುಂಚಶ್ರೀಗಳ ನೇತೃತ್ವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಪುರಾಣ ಪ್ರಸಿದ್ಧ ಕಬ್ಬಳಿಯಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ವತಿಯಿಂದ ಬಸವೇಶ್ವರಸ್ವಾಮಿಯ ಜಾತ್ರಾ ಮಹೋತ್ಸವ ನ.1 ಶನಿವಾರದಿಂದ ನ.5 ಬುಧುವಾರದ ವರೆಗೆ 5 ದಿನಗಳ ಕಾಲ





ವಿಜೃಂಭಣೆಯಿಂದ ನಡೆಯಲಿದೆ.

ನ.1ರ ಶನಿವಾರ ಬೆಳಗ್ಗೆ ಕಬ್ಬಳಿ ಶಾಖಾಮಠದ ಶಿವಪುತ್ರನಾಥ ಸ್ವಾಮೀಜಿಯವರ ನೇತೃತ್ವದಲ್ಲಿ ಮಂಡಕನಹಳ್ಳಿ ಗ್ರಾಮಸ್ಥರಿಂದ ದೇಗುಲಕ್ಕೆ ಹೂವಿನ ಚಪ್ಪರದ ಕಾರ್ಯ ಜರುಗಲಿದ್ದು, ಪ್ರಾತಃಕಾಲದಲ್ಲಿ ಗೋಪೂಜೆ, ವಿಘ್ನೇಶ್ವರ ಪೂಜೆ, ಶ್ರೀ ಬಸವೇಶ್ವರ ಸ್ವಾಮಿಗೆ ರುದ್ರಾಭಿಷೇಕ ಹಾಗೂ ವಿವಿಧ ಪೂಜಾ ಕೈಂಕರ್ಯಗಳು ನೆರವೇರಲಿವೆ. ಬೆಳಗ್ಗೆ 8.30ರ ಸುಮಾರಿನಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರು ಸನ್ನಿಧಿಯ ಆವರಣದಲ್ಲಿ ಧರ್ಮ ಧ್ವಜಾರೋಹಣ ನೆರವೇರಿಸುವ ಮೂಲಕ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಸಂಜೆ ಬಸವೇಶ್ವರಸ್ವಾಮಿ ಆಂಗ್ಲ ಮಾಧ್ಯಮ ಶಾಲೆ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ.

ನ.2ರ ಭಾನುವಾರ ಬೆಳಗ್ಗೆ ಬಸವೇಶ್ವರಸ್ವಾಮಿಗೆ ವಿಶೇಷ ಅಲಂಕಾರ, ದೀಪದಾರತಿ ಹಾಗೂ ವಿಶೇಷ ಪೂಜಾ ವಿಧಿ ವಿಧಾನಗಳು ಜರುಗಲಿದ್ದು, ಸಂಜೆ 6.30 ರಿಂದ ಮಿಮಿಕ್ರಿ ಗೋಪಿ ಅವರಿಂದ ಹಾಸ್ಯ ಸಂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ನ.3 ಸೋಮವಾರ ಬೆಳಗ್ಗೆ ಬಂಡಿ ಉತ್ಸವ, ಧಾರ್ಮಿಕ ಕಾರ್ಯಕ್ರಮಗಳು ಜರುಗಲಿದ್ದು, ಚುಂಚಶ್ರೀಗಳ ದಿವ್ಯಸಾನಿಧ್ಯದಲ್ಲಿ ಬೆಂಗಳೂರಿನ



ಉದ್ಯಮಿ ಪ್ರದೀಪಾ- ವೆಂಕಟೇಶ ಪ್ರಸಾದ್ ಕುಟುಂಬದವರಿಂದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ನೆರವೇರಲಿದೆ.

ಸಂಜೆ ಬಸವೇಶ್ವರಸ್ವಾಮಿ ಸರ್ಪೋತ್ಸವ, ಚೌಡೇಶ್ವರಿದೇವಿ ಉತ್ಸವ ಜಗದ್ಗುರು ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಪುತ್ಥಳಿಕೆ, ನಿರ್ಮಲಾನಂದನಾಥ ಸ್ವಾಮೀಜಿಯವರ ಮುತ್ತಿನ ಪಲ್ಲಕ್ಕಿ ಉತ್ಸವ ಹಾಗೂ ದೇಗುಲದ ಆವರಣದಲ್ಲಿರುವ ಪುಷ್ಕರಣಿಯಲ್ಲಿ ಚುಂಚಶ್ರೀಗಳ ತೆಪ್ಪೋತ್ಸವ ವೈಭವದಿಂದ ಸಾಗಲಿದೆ. ನಂತರ ಧಾರ್ಮಿಕ ಸಭೆ ನಡೆಯಲಿದೆ.

> ಪ್ರತಿವರ್ಷಕ್ಕಿಂತ ಈ ಬಾರಿ ಜಾತ್ರಾ ಮಹೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಸಮೂಹ ಸೇರಲಿದೆ. ನೀರು, ನೆರಳು, ಪೂಜೆ-ಜಪ, ಭಜನೆ, ದರ್ಶನ ಹಾಗೂ ಅನ್ನದಾಸೋಹದ ವ್ಯವಸ್ಥೆ ಮಾಡಲಾಗಿದೆ. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ನ. 1ರ ಬೆಳಗ್ಗೆ ಧರ್ಮಧ್ವಜಾರೋಹಣ ಮಾಡುವ ಮೂಲಕ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಿದ್ದಾರೆ.
>
> **-ಶ್ರೀ ಶಂಭುನಾಥ ಸ್ವಾಮೀಜಿ, ಆದಿಚುಂಚನಗಿರಿ ಹಾಸನ ಶಾಖಾಮಠ**

ನ.4 ಮಂಗಳವಾರ ಬೆಳಗ್ಗೆ ಬಸವೇಶ್ವರಸ್ವಾಮಿಗೆ ಬೆಣ್ಣೆ ಅಲಂಕಾರ ಹಾಗೂ ವಿಶೇಷ ಪೂಜೆಗಳೊಂದಿಗೆ ಧಾರ್ಮಿಕ ವಿಧಿ ವಿಧಾನಗಳು ನೆರವೇರಲಿವೆ. ಭಕ್ತರಿಂದ ಬಸವೋತ್ಸವ ಹಾಗೂ ಸಂಜೆ ಸುಮಾರಿನಲ್ಲಿ ಖ್ಯಾತ ವಾಗ್ಮಿ ಶಿವಾರ ಉಮೇಶ್ ಅವರಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

ನ.5ರ ಬುಧವಾರ ಬೆಳಗ್ಗೆ ಹಾಸನ ಶಾಖಾಮಠದ ಶಂಭುನಾಥ ಸ್ವಾಮೀಜಿಯವರು ಬಸವೇಶ್ವರಸ್ವಾಮಿಗೆ ವಿವಿಧ ಅಭಿಷೇಕ, ಕುಂಕುಮಾರ್ಚನೆ, ಪುಷ್ಪಾರ್ಚನೆ ಹಾಗೂ ಮುತ್ತಿನಾರತಿಯೊಂದಿಗೆ ವಿಶೇಷ ಪೂಜೆಗಳನ್ನು ನೆರವೇರಿಸಲಿದ್ದಾರೆ. ಸಂಜೆ 5 ಗಂಟೆಗೆ ಸಲ್ಲುವ ಗೋಧೂಳಿ ಲಗ್ನದಲ್ಲಿ ಧರ್ಮಧ್ವಜ ಅವರೋಹಣ ನೆರವೇರಲಿದ್ದು, ಶ್ರೀ ಬಸವೇಶ್ವರಸ್ವಾಮಿಯ ಉತ್ಸವ ಮೂರ್ತಿಯನ್ನು ಊರಿನ ರಾಜಬೀದಿಯಲ್ಲಿರುವ ಮೆರವಿಗ್ರಹ ದೇಗುಲಕ್ಕೆ ಗುಡಿದುಂಬಿಸುವ ಮೂಲಕ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಜಾನುವಾರುಗಳ ಪ್ರದಕ್ಷಿಣೆ: ಸುತ್ತಮುತ್ತಲ ಗ್ರಾಮಗಳಿಂದ ರೈತರು ತಮ್ಮ ಜಾನುವಾರುಗಳನ್ನು ಕ್ಷೇತ್ರದ ಸನ್ನಿಧಿಗೆ ಕರೆತಂದು ದೇಗುಲದ ಸುತ್ತ ಪ್ರದಕ್ಷಣೆ ಮಾಡಿಸಿ ತೀರ್ಥ ಪ್ರೇಕ್ಷಣೆಯೊಂದಿಗೆ ದೇವರ ಕೃಪೆಗೆ ಪಾತ್ರರಾಗಲಿದ್ದಾರೆ. ಬೆಂಗಳೂರು, ಮೈಸೂರು, ಭದ್ರಾವತಿ, ಶಿವಮೊಗ್ಗ, ಹಾವೇರಿ ಸೇರಿದಂತೆ ವಿವಿಧ ಪಟ್ಟಣಗಳಿಂದ ಭಕ್ತರು ಜಾತ್ರಾ ಮಹೋತ್ಸವಕ್ಕೆ ಆಗಮಿಸುವುದು ವಿಶೇಷವಾಗಿದೆ.

# ಜಿಲ್ಲಾದ್ಯಂತ ವರುಣನ ಅಬ್ಬರ: ಜನಜೀವನ ಅಸ್ತವ್ಯಸ್ತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ಸೇರಿ ಜಿಲ್ಲೆಯ ವಿವಿಧೆಡೆ ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಮಳೆಯ ಅಬ್ಬರ ಸೋಮವಾರವೂ ಮುಂದುವರಿದಿದ್ದು ಜನಜೀವನ ಅಸ್ತವ್ಯಸ್ತವಾಗಿದೆ.



ಕೆರೆಕಟ್ಟೆಗಳು ಭರ್ತಿಯಾಗಿ ಜಮೀನುಗಳು ಜಲಾವೃತವಾಗಿವೆ. ಅರಸೀಕೆರೆ ತಾಲ್ಲೂಕಿನಲ್ಲಿ ರಾತ್ರಿ ಸುರಿದ ಭಾರೀ ಮಳೆಗೆ ಸುಮಾರು ಹತ್ತಕ್ಕೂ ಹೆಚ್ಚು ಗ್ರಾಮಗಳ ಕೆರೆಗಳು ಒಡಲು ತುಂಬಿಕೊಂಡು ಕೋಡಿ ಬಿದ್ದಿವೆ. ಕಣಕಟ್ಟೆ ಹೋಬಳಿಯ ಹಿರೇಹಳ್ಳ ಉಕ್ಕಿ ಹರಿಯುತ್ತಿದೆ. ಹಳ್ಳದ ಎರಡು ಭಾಗದಲ್ಲಿರುವ ತೆಂಗಿನ ತೋಟಗಳು ಜಲಾವೃತಗೊಂಡಿವೆ.



ಅಲ್ಲದೆ ಈ ಹಳ್ಳದ ದಡದಲ್ಲಿರುವ ವೈಜಿ ಹಳ್ಳಿಯ ಬಸವೇಶ್ವರ ದೇವಾಲಯದ ಬಳಿ ಹಾಗೂ ಸರ್ಕಾರಿ ಶಾಲೆಯವರೆಗೂ ನೀರು ರಭಸವಾಗಿ ಹರಿಯುತ್ತಿದೆ. ಹಳ್ಳದ ಪ್ರವಾಹ ನೋಡಲು ಮಾಡಾಳು ವೈಜಿಹಳ್ಳಿ ದಿಬ್ಬೂರಿನ ಜನರು ಇಲ್ಲಿಗೆ ಭೇಟಿ ನೀಡಿ ಕಣ್ತುಂಬಿಕೊಂಡು ಅಂತೀವ ಸಂತೋಷ ವ್ಯಕ್ತಪಡಿಸಿದರು.

2021 ರಲ್ಲಿ ಇದೇ ಅವಧಿಯಲ್ಲಿ ಹಳ್ಳ ಉಕ್ಕಿ ಹರಿದು ಪ್ರವಾಹ ಬಂದಿತ್ತು ಎಂದು ಅನೇಕ ರೈತರು ಮಾತನಾಡುತ್ತಿದ್ದರು. ಹರಿಯುವ ನೀರಿನಲ್ಲಿ ಜನರು ಹಾಗೂ ಚಿಕ್ಕ ಮಕ್ಕಳು ಓಡಾಡುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಬಿ.ಎಂ ಕುರ್ಕೆ ಹೊಸಕೆರೆ ಸೊಪ್ಪಿನಹಳ್ಳಿ, ಚಿಕ್ಕಂಡಿಹಳ್ಳಿ, ದಿಬ್ಬೂರಳ್ಳ ಯರೇಹಳ್ಳಿ ಕೆರೆ, ದಳವಾಯಿ ಕೆರೆ, ಮಾಡಾಳುಕೆರೆ ಕೋಡಿ ಬಿದ್ದಿವೆ.

ಕಳೆದ ಮೂರು ನಾಲ್ಕು ವರ್ಷಗಳಿಂದ ಮಳೆ ಇಲ್ಲದೆ ಬಾಡಿ ಹೋಗಿದ್ದ ತೆಂಗಿನ ತೋಟಗಳಿಗೆ ಈ ವರ್ಷ ಬಿದ್ದಿರುವ ಮಳೆಯಿಂದ ಜೀವ ಕಳೆ ಬಂದಿದ್ದು ರೈತರು ಹರ್ಷ ವ್ಯಕ್ತಪಡಿಸಿದ್ದಾರೆ.

### ಚನ್ನರಾಯಪಟ್ಟಣ ವರದಿ

ತಾಲ್ಲೂಕಿನಲ್ಲಿ ಹಳ್ಳ-ಕೊಳ್ಳಗಳು ತುಂಬಿ ಹರಿಯುತ್ತಿವೆ. ಮಿಂಚು, ಗುಡುಗು, ಸಿಡಿಲು ಹಾಗೂ ಗಾಳಿಯ ಅಬ್ಬರವಿಲ್ಲದೆ ಸುರಿದ ಹದ ಮಳೆಯಿಂದ ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ. ಅದೇ ರೀತಿ ಕೆಲವೆಡೆ ಕೆರೆ ಕೋಡಿ ಒಡೆದು ಬೆಳೆಗೆ ಹಾನಿಯುಂಟಾಗಿದೆ.


ಎಡಬಿಡದೆ ಸುರಿದ ಮಳೆಯಿಂದ ಹಳ್ಳ-ಕೊಳ್ಳಗಳು ಉಕ್ಕಿ ಹರಿಯುತ್ತಿದ್ದು, ಕೆರೆ-ಕಟ್ಟೆಗಳಲ್ಲಿ ಶೇ.50 ರಿಂದ 60 ರಷ್ಟು ನೀರು ಸಂಗ್ರಹವಾಗಿದೆ. ಹಳ್ಳಗಳ ಮೂಲಕ ಕೆರೆಗಳಿಗೆ ನೀರು ಹರಿಯುತ್ತಿದೆ. ತೆಂಗಿನ ತೋಟಗಳು ಮತ್ತು ಕೃಷಿ ಜಮೀನುಗಳು ಜಲಾವೃತಗೊಂಡಿವೆ. ಮಳೆಯಿಂದಾಗಿ ಹಳ್ಳದ ಪ್ರದೇಶಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದ್ದು ಕೆಲವೆಡೆ ಜಮೀನು ರಸ್ತೆಗಳು ಮುಳುಗಡೆಯಾಗಿವೆ. ತಾಲ್ಲೂಕಿನ ಹಿರೀಸಾವೆ ಗ್ರಾಮದ ಚಿಕ್ಕ ಬೀದಿಯ ಜಯಮ್ಮ ಎಂಬವವರ ಮನೆಯ ಒಂದು ಭಾಗದ ಗೋಡೆ ಕುಸಿದು ಬಿದ್ದಿದೆ. ಯಾಳನಹಳ್ಳಿ ಗ್ರಾಮದಲ್ಲಿ ಮರ ಬಿದ್ದಿರುವ ಪರಿಣಾಮ ಪುಟ್ಟೇಗೌಡ ಎಂಬುವವರ ಮನೆಗೆ ಹಾನಿಯಾಗಿದೆ.

ಕರಿಕ್ಯಾತನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಶಾಲೆಯ ಗೋಡೆ ಕುಸಿದಿದೆ. ಮಕ್ಕಳ ಹಾಜರಾತಿ ಕೊರತೆ ಪರಿಣಾಮ ಹಲವು ವರ್ಷಗಳ ಹಿಂದೆಯೇ ಬಾಗಿಲು ಮುಚ್ಚಲಾಗಿದ್ದು ಅಪಾಯ ಸಂಭವಿಸಿಲ್ಲ.

ಆಲೂರು ತಾಲ್ಲೂಕಿನಾದ್ಯಂತ ಸೋಮವಾರ ಸಂಜೆ ಸುರಿದ ಭಾರೀ ಮಳೆಗೆ ಜನಜೀವನ ಅಸ್ತವ್ಯಸ್ತವಾಗಿದೆ. ರಸ್ತೆಗಳೆಲ್ಲ ಜಲಾವೃತವಾಗಿ ವಾಹನ ಸಂಚಾರಕ್ಕೆ ಪರದಾಡುವಂತಾಯಿತು. ಅರಣ್ಯದಂಚಿನ ಪ್ರದೇಶಗಳಲ್ಲಿ ರಸ್ತೆಗಳು ಧರೆಗುರುಳಿದ ಸಂಚಾರಕ್ಕೂ ಅಡಚಣೆಯಾಯಿತು. ಕೆಲವೆಡೆ ವಿದ್ಯುತ್ ಕಂಬದ ಮೇಲೆ ಮರದ ಕೊಂಬೆ ಬಿದ್ದು ವಿದ್ಯುತ್ ಸಂಪರ್ಕದಲ್ಲಿ ವ್ಯತ್ಯಯವಾಯಿತು.

ಸಂಜೆ 4.30 ರಿಂದ ಧಾರಾಕಾರವಾಗಿ ವರುಣ ಅಬ್ಬರಿಸಿದ ಪರಿಣಾಮ ಹಾಸನ ನಗರದಲ್ಲಿ ಜನಜೀವನ ತತ್ತರಗೊಂಡಿತು. ಹಾಸನಾಂಬ ಜಾತ್ರಾ ಮಹೋತ್ಸವ ಅಂಗವಾಗಿ ವಾಹನಗಳ ಓಡಾಟ ಹೆಚ್ಚಿದೆ. ಬಿಎಂ ರಸ್ತೆಯಲ್ಲಿ ಸಂಚಾರ ದಟ್ಟಣೆ ವಿಪರೀತಗೊಂಡಿದೆ. ಏಕಾಏಕಿ ಮಳೆ ಸುರಿದಿದ್ದರಿಂದ ಬೈಕ್ ಸವಾರರು ತೊಯ್ದು ತೊಪ್ಪೆಯಾದರು. ರಸ್ತೆಗಳೆಲ್ಲಾ ನೀರಿನಿಂದ ಆವೃತವಾಗಿ ಸಾರ್ವಜನಿಕರು ಪರದಾಡಿದರು.

# ಅಪಘಾತದಲ್ಲಿ ಇಬ್ಬರು ಸಾವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹಾಸನಾಂಬ ದರ್ಶನ ಪಡೆದು ವಾಪಸ್ ಹೋಗುವಾಗ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ತಾಲ್ಲೂಕಿನ ಕಗ್ಗಲಿಕಾವಲು ಅರಣ್ಯ ಪ್ರದೇಶದ ಬಳಿ ಘಟನೆ ನಡೆದಿದೆ. ಬೆಂಗಳೂರು ಮೂಲದ ಬಸವರಾಜು (19), ಅನುಶ್ರೀ (19) ಮೃತರು. ಛಾಯಾ (20) ಎಂಬುವರಿಗೆ ಗಾಯಳಾಗಿವೆ. ಎರಡು ಬೈಕ್‌ಗಳಿಗೆ ಇನ್ನೋವಾ ಕಾರು ಡಿಕ್ಕಿಯಾಗಿ ಯುವಕ-ಯುವತಿ ಬಲಿಯಾಗಿದ್ದಾರೆ. ಹಾಸನಾಂಬ ದೇವಿ ದರ್ಶನ ಮುಗಿಸಿ ಒಂದೇ ಬೈಕ್‌ನಲ್ಲಿ ಮೂವರೂ ತೆರಳುತ್ತಿದ್ದರು. ಚನ್ನರಾಯಪಟ್ಟಣ ಕಡೆಯಿಂದ ಬರುತ್ತಿದ್ದ ಕೆಎ-13-ಪಿ-1521 ನಂಬರ್‌ನ ಇನ್ನೋವಾ ಕಾರು ಡಿಕ್ಕಿ ಹೊಡೆದಿದೆ. ಹೌಸಿಂಗ್ ಬೋರ್ಡ್ ಬಳಿ ವೇಗವಾಗಿ ಬಂದು ಮೊದಲು ಆಕ್ಟೀವ್ ಹೋಂಡಾಗೆ ಡಿಕ್ಕಿ ಹೊಡೆದು ನಂತರ ಮೂವರಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಅರಣ್ಯಕ್ಕೆ ಕಾರು ನುಗ್ಗಿದೆ. ಡಿಕ್ಕಿ ರಭಸಕ್ಕೆ ಸ್ಥಳದಲ್ಲೇ ಬಸವರಾಜು ಹಾಗೂ ಅನುಶ್ರೀ ಮೃತಪಟ್ಟಿದ್ದಾರೆ.

ಮತ್ತೊಂದು ಬೈಕ್ ಸವಾರ ಮೊಹಮದ್ ಶಾಹಿದ್‌ಗೂ ಗಂಭೀರ ಗಾಯಗಳಾಗಿವೆ. ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

# ಹಾಸನಾಂಬ ದರ್ಶನ ಸುಸೂತ್ರ ಸಂಜೆ ಬಳಿಕ ಮಳೆ ಅಡ್ಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಾಸನಾಂಬ ಸಾರ್ವಜನಿಕ ದರ್ಶನದ 11ನೇ ದಿನವಾದ ಸೋಮವಾರ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬಂದರು.

ಸಂಜೆ ಬಳಿಕ ಸುರಿದ ಭಾರಿ ಮಳೆಯಿಂದ ಸ್ವಲ್ಪ ಭಕ್ತರ ಸಂಖ್ಯೆ ಇಳಿಮುಖವಾಯಿತು. ದೀಪಾವಳಿ ಹಿನ್ನೆಲೆ ಸಾಲು ಸಾಲು ರಜೆ ಇರುವುದರಿಂದ ಎರಡು ದಿನ ಭಕ್ತರ ಸಂಖ್ಯೆ ಹೆಚ್ಚುವ ನಿರೀಕ್ಷೆಯಿದೆ. ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ, ವಿಪಕ್ಷ ನಾಯಕ ಆರ್.ಅಶೋಕ್, ಮೈಸೂರು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ, ನಟ ವಿಜಯ ರಾಘವೇಂದ್ರ ಮೊದಲಾದವರು ಕುಟುಂಬ ಸಮೇತ ಆಗಮಿಸಿ ದೇವಿಯ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು.

ದರ್ಶನ ಕುರಿತು ಅಪ್‌ಡೇಟ್ ನೀಡಿರುವ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ಸೋಮವಾರ ಬೆಳಗ್ಗೆಯೂ ಹಾಸನಾಂಬೆ ದರ್ಶನ ಸುಗಮವಾಗಿ ನಡೆದಿದೆ. ಪೂಜಾ ಕಾರ್ಯಕ್ರಮದ ಕಾರಣ ಸೋಮವಾರ ಹಾಗೂ ಮಂಗಳವಾರ ಮಧ್ಯಾಹ್ನ 2 ರಿಂದ 3.30 ಗಂಟೆ ನಡುವೆ ದರ್ಶನಕ್ಕೆ ಅವಕಾಶ ಇರುವುದಿಲ್ಲ ಎಂದಿದ್ದಾರೆ.

ಮಂಗಳವಾರ ದೀಪಾವಳಿ ವಿಶೇಷ ಪೂಜೆ ಕಾರಣಕ್ಕೆ



ರಾತ್ರಿ 9 ಕ್ಕೆ ಸಾರ್ವಜನಿಕ ದರ್ಶನದ ಬಾಗಿಲುಗಳನ್ನು ಮುಚ್ಚಲಾಗುತ್ತದೆ. ಬುಧವಾರ ಬೆಳಗಿನ ಜಾವ 5.30ಕ್ಕೆ ಪೂಜೆ ಮುಗಿಸಿ ಮತ್ತೆ ದರ್ಶನ ಆರಂಭವಾಗುತ್ತದೆ.

ಕೊನೆಯ ದಿನವಾದ ಬುಧವಾರ ಸಂಜೆ 7 ಗಂಟೆಯವರೆಗೆ ಮಾತ್ರ ದರ್ಶನಕ್ಕೆ ಅವಕಾಶವಿರುತ್ತದೆ. ಅದೇ ದಿನ ಸಂಜೆ ಸಿದ್ದೇಶ್ವರ ಸ್ವಾಮಿಯ ಜಾತ್ರೆ ಇದೆ. ಗುರುವಾರ ಮಧ್ಯಾಹ್ನ ಶಾಸ್ತ್ರದ ಪ್ರಕಾರ ಪೂಜೆ ನೆರವೇರಿಸಿ ಮುಂದಿನ ವರ್ಷದ ವರೆಗೆ ದೇವಾಲಯದ ಬಾಗಿಲನ್ನು ಮುಚ್ಚಲಾಗುತ್ತದೆ. ಆದರೆ, ಈ ದಿನ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಇರುವುದಿಲ್ಲ ಎಂದು ವಿವರಿಸಿದ್ದಾರೆ.

ಭಕ್ತಾದಿಗಳು ಈ ಸಮಯಕ್ಕೆ ಅನುಗುಣವಾಗಿ ತಮ್ಮ ದೇವಾಲಯದ ಭೇಟಿಯನ್ನು ಯೋಜಿಸಿಕೊಳ್ಳಬೇಕಾಗಿ ವಿನಂತಿ ಮಾಡಿದ್ದಾರೆ.



ದೀಪಾವಳಿ ಹಾಗೂ ಹಾಸನಾಂಬೆ ಜಾತ್ರೋತ್ಸವದ ಹಿನ್ನೆಲೆಯಲ್ಲಿ ಕನ್ನಡ ಪೋಸ್ಟ್ ಹೊರತಂದಿರುವ ವಿಶೇಷ ಪುರವಣಿ 'ಜ್ಯೋತಿರ್ಗಮಯ'ವನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಬಿಡುಗಡೆ ಮಾಡಿದರು. ಸಕಲೇಶಪುರ ಶಾಸಕ ಸಿಮೆಂಟ್ ಮಂಜು, ಸುಳ್ಯ ಶಾಸಕಿ ಭಾಗೀರಥಿ, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಜಿಲ್ಲಾಧ್ಯಕ್ಷ ಕೆ.ಹೆಚ್.ವೇಣುಕುಮಾರ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಸಂಪಾದಕ ಮಂಜು ಬನವಾಸೆ ಇತರರಿದ್ದರು.

# ಅರಕಲಗೂಡು ಜನರ ನಿದ್ದೆಗೆಡಿಸಿದ ಅಕಾಲಿಕ ಮಳೆ

## ಅಪಾರ ಪ್ರಮಾಣದ ಬೆಳೆ ನಾಶ | ಶಾಸಕ ಎ. ಮಂಜು ಪರಿಶೀಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನಾದ್ಯಂತ ಸುರಿದ ಅಕಾಲಿಕ ಮಳೆಗೆ ಹಲವು ಗ್ರಾಮಗಳಲ್ಲಿನ ಕೆರೆ ಕೋಡಿ ಒಡೆದು ಕೃಷಿ ಜಮೀನು ಜಲಾವೃತಗೊಂಡಿದ್ದು, ಕೆಲವು ಗ್ರಾಮಗಳ ಸಂಪರ್ಕ ಕೂಡ ಕಡಿತಗೊಂಡಿದೆ.

ಈ ಸಾಲಿನ ಮುಂಗಾರು ಪೂರ್ವ ಮತ್ತು ಮುಂಗಾರು ಹಂಗಾಮಿನಲ್ಲಿ ಬಿದ್ದಿರುವ ಮಳೆಗಿಂತ ಹೆಚ್ಚು ಮಳೆ ಸುರಿದು ದಾಖಲೆ ಸೃಷ್ಟಿಸಿದೆ. ಕಸಬಾ ಹೋಬಳಿ ಸೇರಿ ಕಾವೇರಿ, ಹೇಮಾವತಿ ನದಿ ಮತ್ತು ಹಿನ್ನೀರು, ಏತನೀರಾವರಿ ನಾಲೆಗಳ ಮೂಲಕ ಈಗಾಗಲೇ ಕೃಷಿ ಕೈಗೊಳ್ಳಲು ನೀರು ಹರಿಯುತ್ತಿದೆ. ಅದರಿಂದ ಅಚ್ಚುಕಟ್ಟು ಮತ್ತು ನಾಲಾ ವ್ಯಾಪ್ತಿಯ ಬಹುತೇಕ ಕೆರೆಗಳು ತುಂಬಿದ್ದು, ಅತಿಯಾದ ಮಳೆ ನೀರು ಕೆರೆಗಳಿಗೆ ಸಂಗ್ರಹವಾಗಿ ಅನಾಹುತ ಉಂಟಾಗಿದೆ.

ಕಟಾವಿಗೆ ಬಂದಿರುವ ಮೆಕ್ಕೆಜೋಳ ಹಾಗೂ ಕಟಾವು ಮಾಡಿರುವ ಜೋಳ ಮಳೆಗೆ ಆಹುತಿಯಾಗಿ ರೈತರ ಕಣ್ಣಲ್ಲಿ ನೀರು ತರಿಸಿದೆ.



ಈಗಾಗಲೇ ಕೈಗೊಂಡಿರುವ ಕೆರೆ ಅಚ್ಚುಕಟ್ಟು ಪ್ರದೇಶದ ಭತ್ತ ಬೆಳೆ ಕೂಡ ಜಲಾವೃತಗೊಂಡಿರುವುದು ಕಂಡುಬದಿದೆ.

ಕೆರೆ ಅಚ್ಚುಕಟ್ಟು ಪ್ರದೇಶದಲ್ಲಿನ ಫಸಲಿಗೆ ಬಂದಿರುವ ಅಡಿಕೆ, ಬಾಳೆ, ತೆಂಗು, ತರಕಾರಿ ಬೆಳೆ ಮತ್ತು ತೋಟಗಾರಿಕೆ ಬೆಳೆಗಳ ಪ್ರದೇಶಕ್ಕೆ ನೀರು ನುಗ್ಗಿದೆ.

ಬೆಳವಾಡಿ ಗ್ರಾಮದ ಹಿರಿಕೆರೆ ಕೋಡಿ ಒಡೆದು ಅಚ್ಚುಕಟ್ಟು ಪ್ರದೇಶದಲ್ಲಿ ಕೈಗೊಳ್ಳಲಾಗಿದ್ದ 80 ಎಕರೆ ಪ್ರದೇಶದ ಭತ್ತ, ಅಡಿಕೆ ಇತರೆ ತೋಟಗಾರಿಕೆ ಬೆಳೆಗಳು ಜಲಾವೃತವಾಗಿವೆ. ಇದೇ ನೀರು ಕೋಟೆ ಕರ್ಪೂರವರವಳ್ಳಿ ಗ್ರಾಮದ ಚನ್ನಯ್ಯ ಅವರ ಅಡಿಕೆ ತೋಟಕ್ಕೆ ನುಗ್ಗಿದೆ.

ಅದೇ ರೀತಿ ಸೀಬಳ್ಳಿ, ಹಾನಗಲ್ಲು ಗ್ರಾಮದ ರಸ್ತೆ ಮೇಲೆ ಕೆರೆ ನೀರು ಹರಿಯುತ್ತಿರುವ ಪರಿಣಾಮ ರಸ್ತೆ ಸಂಪರ್ಕ ಕಡಿತಗೊಂಡಿದೆ.

ತಾಲ್ಲೂಕಿನ ಮುತ್ತಿಗೆ ಗ್ರಾಮದ ಕೆರೆಗೆ ಅಧಿಕ ಮಳೆ ನೀರು ಸಂಗ್ರಹವಾದ ಹಿನ್ನೆಲೆ ಕೋಡಿಯಲ್ಲಿ ಭಾರೀ ಪ್ರಮಾಣದ ನೀರು ನುಗ್ಗುತ್ತಿರುವ ಪರಿಣಾಮ ಕೋಡಿ ಅಕ್ಕಪಕ್ಕದ ಕೃಷಿ ಜಮೀನು, ವಾಸದ ಮನೆಗಳಿಗೆ ನೀರು ನುಗ್ಗಿ ಹಾನಿ ಉಂಟುಮಾಡಿದೆ. ನಾಲ್ಕೈದು ವಾಸದ ಮನೆಗಳಿಗೂ ನೀರು ನುಗ್ಗಿದ ಹಿನ್ನಲೆ ಇಡೀ ರಾತ್ರಿ ನಿವಾಸಿಗಳು ಭಯದಿಂದ ನಿದ್ರೆ ಮಾಡಬೇಕಾಯಿತು.

ಅರಕಲಗೂಡು-ಸತೆಮರೂರು ನಡುವಿನ ಪಾರಸನಹಳ್ಳಿ ಗ್ರಾಮದ ಸಮೀಪ ಕೆರೆಕೋಡಿ ನೀರು ರಸ್ತೆ ಮೇಲೆ ಇಡೀ ರಾತ್ರಿ ಭಾರೀ ಪ್ರಮಾಣದಲ್ಲಿ ಹರಿದ ಪರಿಣಾಮ ಸಂಪರ್ಕ ಕೂಡ ಕಡಿತಗೊಂಡಿತ್ತು. ಬೆಳಿಗ್ಗೆ ಜೆಸಿಬಿ ಮೂಲಕ ತೆರವು ಕಾರ್ಯಚರಣೆ ಕೈಗೊಳ್ಳಲಾಯಿತು.

ಪಟ್ಟಣದ ದೊಡ್ಡಕೆರೆಗೆ ಭಾರೀ ಪ್ರಮಾಣದ ನೀರು ಹರಿದು ಬರುತ್ತಿರುವ ಪರಿಣಾಮ ಕೆರೆ ಅಪಾಯ ಮಟ್ಟದಿಂದ ಕೂಡಿದೆ. ಕೋಡಿ ಬಿರುಕು ಬಿಟ್ಟಿರುವ ಪರಿಣಾಮ ನಾಲೆಯಲ್ಲಿ ಹರಿಯುವ ನೀರಿನ ರಭಸ ಕಂಡುಬದಿದೆ. ಅದರಿದ ಪಟ್ಟಣದ ಗದ್ದೆಬಯಲಿನಲ್ಲಿ ನಿರ್ಮಿಸಿಕೊಂಡಿರುವ ವಾಸದ ಮನೆಗಳಿಗೆ ನೀರು ನುಗ್ಗಿದೆ. ಕೋಡಿ ನೀರು ಅಧಿಕವಾಗಿ ಹರಿಯುತ್ತಿದ್ದು, ಹೆಂಟಗೆರೆ ಕೆರೆ ಕೂಡ ಭರ್ತಿಯಾಗಿದೆ. ಇಲ್ಲಿಂದ ಭಾರೀ ಪ್ರಮಾಣದ ನೀರು ಹರಿಯುತ್ತಿರುವ ಪರಿಣಾಮ ಕಾಶೀಪುರ ಬಳಿಯ ಕೊಲ್ಲಿಯಲ್ಲಿ ಅಧಿಕ ನೀರು ಸಂಗ್ರಹವಾಗಿ ಕೃಷಿ ಜಮೀನ್ನನ್ನು ಆವರಿಸಿಕೊಂಡಿದೆ. ಅಲ್ಲದೆ ನೇಗೆರೆ, ಮರಡಿ ನಡುವಿನ ರಸ್ತೆ ಕೂಡ ಜಲಾವೃತಗೊಂಡಿದೆ.



ತಾಲ್ಲೂಕಿನ ಕತ್ತಿಮಲ್ಲೇಮನಹಳ್ಳಿ ಬಳಿ ಹರಿಯುವ ಅಡಿಕೆಬೊಮ್ಮನಹಳ್ಳಿ ಏತ ನೀರಾವರಿ ನಾಲೆಯಲ್ಲಿ ಹೂಳು ತುಂಬಿಕೊಡಿದ್ದ ಪರಿಣಾಮ ಮಳೆ ನೀರು ಹೆಚ್ಚುವರಿಯಾಗಿ ತುಂಬಿದ ಪರಿಣಾಮ ನೀರು ಮುಂದೆ ಹರಿಯಲು ಸಾಧ್ಯವಾಗದೇ ನಾಲೆಯ ತಡಗೋಡೆಯಿಂದ ಹೊಳ್ಳಿ ಸಮೀಪದ ಸರ್ಕಾರಿ ಪ್ರೌಢಶಾಲೆಯ ಕಾಂಪೌಡ್ ಉರುಳಿದೆ. ಇಲ್ಲಿಯೂ ರಸ್ತೆಯ ಮೇಲೆ ಅಧಿಕ ನೀರು ಹರಿಯುತ್ತಿರುವ ಪರಿಣಾಮ ಕೃಷಿ ಜಮೀನು ಹಾನಿಯಾಗಿದೆ.

**ಹಾನಿ ಪ್ರದೇಶಕ್ಕೆ ಶಾಸಕ ಭೇಟಿ:** ಅಕಾಲಿಕ ಮಳೆಯಿಂದ ಹಾನಿ ಸಂಭವಿಸಿರುವ ಕೆರೆಕೋಡಿ, ಕೃಷಿ ಪ್ರದೇಶಕ್ಕೆ ಶಾಸಕ ಎ.ಮಂಜು ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸಿದರು. ಮುತ್ತಿಗೆ ಕೆರೆಯಲ್ಲಿ ಭಾರೀ ಪ್ರಮಾಣದ ನೀರು ಸಂಗ್ರಹವಾಗಿರುವ ಪರಿಣಾಮ ಕೋಡಿಯಲ್ಲಿ ಹೆಚ್ಚು ನೀರು ಹರಿದು ಕೃಷಿ ಪ್ರದೇಶ, ವಾಸದ ಮನೆಗಳು ಹಾಗೂ ರಸ್ತೆಗೆ ಹಾನಿಯಾಗಿದೆ. ಇಷ್ಟೊಂದು ಪ್ರಮಾಣದ ನೀರು ಸಣ್ಣ ಪ್ರಮಾಣದ ತೂಬಿನಲ್ಲಿ ಹರಿಯಲು ಸಾಧ್ಯವಿಲ್ಲ. ಕೂಡಲೇ ಈ ರಸ್ತೆಯ ಮಧ್ಯೆ ದೊಡ್ಡದಾದ ಸೇತುವೆ ನಿರ್ಮಿಸಿ ನೀರು ಸರಾಗವಾಗಿ ಸಾಗುವಂತೆ ಕ್ರಮ ವಹಿಸಬೇಕೆಂದು ಪಿಡಬ್ಲೂಡಿ ಇಂಜಿನಿಯರ್‌ಗೆ ದೂರವಾಣಿ ಮೂಲಕ ಸೂಚನೆ ನೀಡಿದರು.

**ಲಭ್ಯವಿರುವ ಪರಿಹಾರ ಕಲ್ಪಿಸಿ:** ಈ ವರ್ಷದಲ್ಲಿ ಅಧಿಕ ಮಳೆ ಶನಿವಾರ ಬಿದ್ದಿದ್ದು, ಕೆರೆಗಳ ಕೋಡಿ ಒಡೆಯಲು ಕಾರಣವಾಗಿದೆ. ಕೂಡಲೇ ಕೋಡಿ ನಿರ್ಮಾಣ, ನೀರು ನುಗ್ಗಿರುವ ಮನೆಗಳು, ಬೆಳೆ ಹಾನಿ ಸಂಭವಿಸಿರುವ ರೈತರಿಗೆ ಲಭ್ಯವಿರುವ ಪರಿಹಾರ ನೀಡಲು ಗಮನಹರಿಸಬೇಕಿದೆ. ಈಗಾಗಲೇ ಬಹುತೇಕ ಕೆರೆಗಳು ಭರ್ತಿಯಾಗಿದ್ದು, ಮುಂದಿನ ದಿನಗಳಲ್ಲಿ ಮಳೆಯ ಪ್ರಮಾಣ ಅಧಿಕಗೊಂಡರೇ ಮತ್ತೊಷ್ಟು ಹಾನಿ ಉಂಟಾಗುವ ಸಾಧ್ಯತೆ ಇದೆ. ಇಂದಿನಿದಲೇ ಸ್ಥಳ ಪರಿಶೀಲನೆ ನಡೆಸಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಶಾಸಕ ಎ.ಮಂಜು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ತಹಸೀಲ್ದಾರ್ ಗ್ರೇಡ್-2 ತಹಶೀಲ್ದಾರ್ ಸಿ.ಸ್ವಾಮಿ ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಶ್ರೀನಿವಾಸ್ ಹಾಜರಿದ್ದರು.

## ವಾಲಿಬಾಲ್ ಆಟಗಾರರಿಗೆ ತರಬೇತಿ ನೀಡಲು ಸಿದ್ಧತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ರಾಜ್ಯದ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ವಾಲಿಬಾಲ್ ಪಂದ್ಯಾವಳಿ ಆಯೋಜಿಸಿ ಉತ್ತಮ ಆಟಗಾರರನ್ನು ಗುರುತಿಸಿ ಉತ್ತಮ ತರಬೇತಿ ನೀಡುವ ಗುರಿ ಹಾಕಿಕೊಳ್ಳಲಾಗಿದೆ ಎಂದು ರಾಜ್ಯ ವಾಲಿಬಾಲ್ ಅಸೋಸಿಯೇಷನ್‌ನ ಹಿರಿಯ ವಾಲಿಬಾಲ್ ಆಟಗಾರ ರಾಮಕೃಷ್ಣೇಗೌಡ ಹೇಳಿದರು.

ತಾಲ್ಲೂಕಿನ ಹಿರೀಸಾವೆಯಲ್ಲಿ ಜಿಲ್ಲಾ ಮಟ್ಟದ ಪಂದ್ಯಾವಳಿ ಆಯೋಜಿಸುವ ಹಿನ್ನೆಲೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ವಾಲಿಬಾಲ್‌ನಲ್ಲಿ ಸಾಧನೆ ಮಾಡಿದ ಆಟಗಾರರಿಗೂ ಎಲ್ಲಾ ಕ್ರೀಡಾಪಟುಗಳಿಗೆ ಸಿಗುವ ಗೌರವ ಮತ್ತು ಸರ್ಕಾರಿ ಸೌಲಭ್ಯ ದೊರೆಯುತ್ತವೆ. ಅದನ್ನು ಯುವ ಆಟಗಾರರಿಗೆ ತಿಳಿಸಬೇಕು ಎಂದರು.



ಜೂನಿಯರ್, ಸಬ್ ಜೂನಿಯರ್, ಸೀನಿಯರ್ ಸೇರಿ ಹಲವು ಹಂತದ ಪಂದ್ಯಾವಳಿ ಆಯೋಜಿಸಲಾಗುವುದು. ಅದರಿಂದ ಉತ್ತಮ ಆಟಗಾರರನ್ನು ಆಯ್ಕೆ ಮಾಡಿ, ಅವರಿಗೆ ರಾಜ್ಯ ಮಟ್ಟದಲ್ಲಿ ಉತ್ತಮ ತರಬೇತಿ ನೀಡಿ ರಾಷ್ಟ್ರ ಮಟ್ಟದ ತಂಡಕ್ಕೆ ಆಯ್ಕೆ ಮಾಡುವಾಗ ಅನುಸರಿಸುವ ಕ್ರಮಗಳನ್ನು ತಿಳಿಸಲಾಗುವುದು ಎಂದು ಹೇಳಿದರು.

ಜಿಲ್ಲಾ ವಾಲಿಬಾಲ್ ಅಸೋಸಿಯೇಷನ್ ಅಧ್ಯಕ್ಷ ಎಂ.ಜೆ. ಪರಮೇಶ್ ಮಾತನಾಡಿ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸ್ಪರ್ಧಿಸಿದ್ದ ಜಿಲ್ಲೆಯ ಆಟಗಾರರನ್ನು ಆಹ್ವಾನಿಸಿ ಅವರಿಂದ ತರಬೇತಿ ಮತ್ತು ಮಾರ್ಗದರ್ಶನವನ್ನು ಯುವ ಆಟಗಾರರಿಗೆ ಕೊಡಿಸಲಾಗುವುದು. ಜಿಲ್ಲೆಯ ಜನಪ್ರತಿನಿಧಿಗಳು, ಎಲ್ಲಾ ಸಂಘ ಸಂಸ್ಥೆಯವರು ಪಂದ್ಯಾವಳಿ ಯಶಸ್ಸಿಗೆ ಸಹಕಾರ ನೀಡಬೇಕು ಎಂದು ತಿಳಿಸಿದರು.

ರಾಜ್ಯ ವಾಲಿಬಾಲ್ ಅಸೋಸಿಯೇಷನ್ ಅಧ್ಯಕ್ಷ ಆರ್.ಹರ್ಷ, ಕಾರ್ಯದರ್ಶಿ ಎಲ್.ಪಿ. ಆಂಟೋನಿ, ಜಿಲ್ಲಾ ಕಾರ್ಯದರ್ಶಿ ಟಿ.ಅರುಣ್ ಕುಮಾರ್ ಹಾಗೂ ಇತರರಿದ್ದರು.

## ಕೇಂದ್ರ ಸಚಿವರಿಗೆ ಅಗೌರವ ಆರೋಪ: ಜೆಡಿಎಸ್ ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಾಸನಾಂಬ ದರ್ಶನಕ್ಕೆ ಬಂದಿದ್ದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಜಿಲ್ಲಾಡಳಿತ ಗೌರವ ನೀಡಿಲ್ಲ ಹಾಗೂ ಶಾಸಕ ಹೆಚ್.ಪಿ.ಸ್ವರೂಪ್ ಅವರನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿ ಜೆಡಿಎಸ್ ಕಾರ್ಯಕರ್ತರು ಮಹಾನಗರ ಪಾಲಿಕೆ ಎದುರಿನ ಮುಖ್ಯ ದ್ವಾರದ ಮುಂಭಾಗ ಭಾನುವಾರ ಹಮ್ಮಿಕೊಂಡಿದ್ದ ಪ್ರತಿಭಟನೆ ತೀವ್ರ ಸ್ವರೂಪ ಪಡೆದು ಬಿಗುವಿನ ವಾತಾವರಣ ಸೃಷ್ಟಿಸಿತ್ತು.

ಹಾಸನಾಂಬ ಜಾತ್ರೆಯನ್ನು ಕಾಂಗ್ರೆಸ್ ಉತ್ಸವವಾಗಿಸಿಕೊಂಡಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದ ಜೆಡಿಎಸ್ ಹಾಲಿ ಹಾಗು ಮಾಜಿ ಶಾಸಕರು ಜಿಲ್ಲಾಧಿಕಾರಿ ಸ್ಥಳಕ್ಕೆ ಬಂದು ಸ್ಪಷ್ಟನೆ ನೀಡುವ ವರೆಗೆ ಪ್ರತಿಭಟನೆ ವಾಪಾಸ್ ಪಡೆಯುವುದಿಲ್ಲವೆಂದು ಪಟ್ಟು ಹಿಡಿದರು. ಆರಂಭದಲ್ಲಿ ಪ್ರತಿಭಟನೆಗೆ ತಲೆ ಕೆಡಿಸಿಕೊಳ್ಳದ ಜಿಲ್ಲಾಧಿಕಾರಿ ಸುಮಾರು ಮೂರು ಗಂಟೆಗಳ ಬಳಿಕ ಪರಿಸ್ಥಿತಿಯ ಗಂಭೀರತೆ ಅರಿತು ದೌಡಾಯಿಸಿದರು. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡುವುದರೊಂದಿಗೆ ಪರಿಸ್ಥಿತಿ ನಿಯಂತ್ರಿಸಿದರು. ಜಿಲ್ಲಾಧಿಕಾರಿ ಆಗಮನಕ್ಕೂ ಮೊದಲು ಪ್ರತಿಭಟನಾಕಾರರ ಮನವೊಲಿಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ದೇವಾಲಯ ಆಡಳಿತಾಧಿಕಾರಿ ಮಾರುತಿ ಬಂದರಾದರೂ ಜಿಲ್ಲಾಧಿಕಾರಿ ಬರುವ ವರೆಗೆ ಸ್ಥಳದಿಂದ ಕದಲುವುದಿಲ್ಲವೆಂದು ಶಾಸಕ ಹೆಚ್.ಪಿ.ಸ್ವರೂಪ್ ಆಕ್ರೋಶಭರಿತರಾಗಿ ಹೇಳಿದ್ದರಿಂದ ಅಧಿಕಾರಿಗಳು ಬಂದ ದಾರಿಗೆ ಸುಂಕವಿಲ್ಲದಂತೆ ವಾಪಾಸ್ಸಾದರು.

ಅರಕಲಗೂಡು ಶಾಸಕ ಎ. ಮಂಜು, ಶಾಸಕ ಹೆಚ್.ಪಿ. ಸ್ವರೂಪ್, ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ, ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್. ಲಿಂಗೇಶ್ ಜಿಲ್ಲಾಧಿಕಾರಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

**ಹೆಚ್‌ಡಿಕೆ ಜೊತೆ ದೂರವಾಣಿ ಮಾತು**

ಸತತ ಮೂರು ಗಂಟೆಗಳ ಪ್ರತಿಭಟನೆ ಬಳಿಕ ಕೊನೆಗೂ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸ್ಥಳಕ್ಕೆ ಬಂದು ಶಾಸಕರೊಂದಿಗೆ ಮಾತುಕತೆ ನಡೆಸುವ ಮೂಲಕ ಪ್ರಕರಣಕ್ಕೆ ಸುಖಾಂತ್ಯ ಹಾಡಿದರು. ಎ.ಮಂಜು ಅವರು ಮಾತನಾಡಿ, ದರ್ಶನಕ್ಕೆ ಬಂದಿದ್ದ ಕೇಂದ್ರ ಸಚಿವರಿಗೆ ಅಗೌರವ ತೋರಿರುವುದು, ಕ್ಷೇತ್ರ ಶಾಸಕರ ಕಡೆಗಣನೆ ಹಾಗು ಸರ್ಕಾರಿ ವಿಜ್ಞಾನ ಕಾಲೇಜು ಮೈದಾನ ಹಾಳು ಮಾಡಿರುವುದಕ್ಕೆ ಸ್ಪಷ್ಟನೆ ಕೋರಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾತನಾಡಿ, ಹೆಚ್.ಡಿ. ಕುಮಾರಸ್ವಾಮಿ ಅವರು ನಾಡು ಕಂಡ ಶ್ರೇಷ್ಠ ರಾಜಕಾರಣಿ. ಅವರಿಗೆ ಅಗೌರವ ತೋರುವ ಸಣ್ಣ ಬುದ್ಧಿ ನನಗಿಲ್ಲ. ಜಾತ್ರಾ ಮಹೋತ್ಸವಕ್ಕೆ ಆಹ್ವಾನಿಸಲು ಮನೆಗೆ ಬರುತ್ತೇನೆಂದು ಕರೆ ಮಾಡಿದಾಗ ಖಂಡಿತ ಬರುತ್ತೇನೆಂದು ಹೇಳಿದ್ದರು. ಹಾಸನಾಂಬ ದರ್ಶನ ಪಡೆದ ಮಾರನೇ ದಿನ ಅವರೇ ಕರೆ ಮಾಡಿ ಜಿಲ್ಲಾಡಳಿತ ಕೈಗೊಂಡಿರುವ ವ್ಯವಸ್ಥೆ ಕುರಿತು ಮೆಚ್ಚುಗೆ ಸೂಚಿಸಿದ್ದಾರೆ. ಆ ದಿನ ಅವರಿಗೆ ಶಿಷ್ಟಾಚಾರ ಪ್ರಕಾರ ಸನ್ಮಾನಿಸದೆ ಇರುವುದು ನಮ್ಮಿಂದ ಆಗಿರುವ ಲೋಪ. ಅವತ್ತು ಲಕ್ಷಾಂತರ ಭಕ್ತರು ಬಂದಿದ್ದರಿಂದ ನಾನು ಅಲ್ಲಿರಲು ಸಾಧ್ಯವಾಗಲಿಲ್ಲ. ಸಿದ್ದೇಶ್ವಸ್ವಾಮಿ ದರ್ಶನದ ಬಳಿಕ ಜಿಲ್ಲಾಡಳಿತದಿಂದ ಸನ್ಮಾನಿಸುವುದು ವಾಡಿಕೆ. ಅದಕ್ಕೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿತ್ತಾದರೂ ಆಗ ಸ್ಥಳದಲ್ಲಿದ್ದವರು ಮಾಡಿಲ್ಲವೆಂದು ಸ್ಪಷ್ಟಪಡಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಪಿ. ಸ್ವರೂಪ್ ಅವರನ್ನು ಆಹ್ವಾನಿಸದೆ ಇರುವ ಸಂಬಂಧ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತೇನೆ. ಯಾವ ಕಾರಣಕ್ಕಾಗಿ ಈ ಲೋಪವಾಗಿದೆ ಎಂಬ ಮಾಹಿತಿ ಗೊತ್ತಿಲ್ಲ. ಇನ್ನು ಸರ್ಕಾರಿ ವಿಜ್ಞಾನ ಕಾಲೇಜು ಮೈದಾನ ಅಭಿವೃದ್ಧಿಪಡಿಸಬೇಕಿದ್ದು ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದೆಂದರು. ಇದೇ ವೇಳೆ ಶಾಸಕ ಎ.ಮಂಜು ಅವರು ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ದೂರವಾಣಿ ಕರೆ ಮಾಡಿ ಜಿಲ್ಲಾಧಿಕಾರಿ ಅವರಿಂದ ಮಾತನಾಡಿಸಿದರು. ಶಾಸಕರು ಹಾಗು ಜೆಡಿಎಸ್ ಕಾರ್ಯಕರ್ತರಿಗೆ ದೇವರ ಪ್ರಸಾದ ವಿತರಿಸುವ ಮೂಲಕ ತಾರಕಕ್ಕೇರಿದ್ದ ವಿವಾದವನ್ನುಜಿಲ್ಲಾಧಿಕಾರಿ ಜಾಣ ನಡೆಯಿಂದ ತಣ್ಣಗಾಗಿಸಿದರು.

## ರಾಜೀವ್ ತಾಂತ್ರಿಕ ಕಾಲೇಜಿಗೆ ಸ್ವಾಯತ್ತ ಸ್ಥಾನಮಾನ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ರಾಜೀವ್ ತಾಂತ್ರಿಕ ಮಹಾವಿದ್ಯಾಲಯವು 2025-26ನೇ ಸಾಲಿನಿಂದ ಸ್ವಾಯತ್ತ ಸ್ಥಾನಮಾನ ಪಡೆದಿದೆ.

ಈ ಮೊದಲೇ ಕಾಲೇಜು ವಿಶ್ವವಿದ್ಯಾಲಯ ಅನುದಾನ ಆಯೋಗದಿಂದ (ಯುಜಿಸಿ) ಅನುಮೋದನೆ ಪಡೆದಿತ್ತು. ನಗರದ ಹೆಸರಾಂತ ಮಕ್ಕಳ ತಜ್ಞ ದಿ. ಡಾ.ವಿ. ರಾಜೀವ್ ಅವರ ಶ್ರಮದ ಫಲವಾಗಿ ರಾಜೀವ್ ಶಿಕ್ಷಣ ಸಂಸ್ಥೆ ಅಡಿಯಲ್ಲಿ 2008ರಲ್ಲಿ 4 ವಿಭಾಗಗಳೊಂದಿಗೆ ಪ್ರಾರಂಭವಾದ ತಾಂತ್ರಿಕ ಕಾಲೇಜು ಪ್ರಸ್ತುತ 9 ಪದವಿ ವಿಭಾಗ, 1 ಸ್ನಾತಕೋತ್ತರ ಪದವಿ ವಿಭಾಗ ಹಾಗೂ 5 ಸಂಶೋಧನಾ ವಿಭಾಗಗಳೊಂದಿಗೆ 2050ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

2024ರಲ್ಲಿ ಈ ಸಂಸ್ಥೆಯು ಎನ್‌ಬಿಎ ಮಾನ್ಯತೆ ಪಡೆಯುವುದರೊಂದಿಗೆ ಅದೇ ವರ್ಷ ಎ ಶ್ರೇಣಿಯೊಂದಿಗೆ ನ್ಯಾಕ್ ಮಾನ್ಯತೆ ಸಹ ಪಡೆದಿದೆ. ಸ್ವಾಯತ್ತ ಸ್ಥಾನಮಾನ ಪಡೆಯುವುದರಿಂದ ಕಾಲೇಜಿಗೆ ಉದ್ಯಮ ಆಧಾರಿತ ಪಠ್ಯಕ್ರಮ ವಿನ್ಯಾಸಗೊಳಿಸುವ ಅವಕಾಶ ಹೊಂದುವುದರ ಜೊತೆಗೆ ತನ್ನದೇಯಾದ ಪರೀಕ್ಷೆ ನಡೆಸುವ, ಪ್ರಶ್ನೆ ಪತ್ರಿಕೆಗಳನ್ನು ಹೊಂದಿಸುವ ಮತ್ತು ಆಂತರಿಕವಾಗಿ ಪ್ರವೇಶ ಪ್ರಕ್ರಿಯೆ ನಿರ್ವಹಿಸುವ ಅಧಿಕಾರವಿರುತ್ತದೆ. ಸಂಸ್ಥೆಯು ಕೈಗಾರಿಕೆಗಳೊಂದಿಗೆ ನೇರ ಸಹಯೋಗ ಸ್ಥಾಪಿಸಲು ಸಾಧ್ಯವಿರುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಮಟ್ಟದಲ್ಲಿ ಉದ್ಯೋಗಾವಕಾಶ ದೊರೆಯುತ್ತವೆ. ಸ್ವಾಯತ್ತ ಸ್ಥಾನಮಾನ ಪಡೆದುದಕ್ಕಾಗಿ ರಾಜೀವ್ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಡಾ.ರಚನಾ ರಾಜೀವ್, ಉಪಾಧ್ಯಕ್ಷ ಡಾ.ರಂಜಿತ್ ರಾಜೀವ್, ಕಾರ್ಯದರ್ಶಿ ಡಾ.ಬಿ.ಎನ್. ರತ್ನ ಅವರು ಕಾಲೇಜಿನ ಆಡಳಿತ ಮಂಡಳಿಯವರು ಹರ್ಷ ವ್ಯಕ್ತಪಡಿಸುವುದರ ಜೊತೆಗೆ ಈ ಸ್ಥಾನಮಾನ ಪಡೆಯಲು ಶ್ರಮಿಸಿದ ಕಾಲೇಜಿನ ಪ್ರಾಂಶುಪಾಲ ಡಾ. ಪಿ.ಕೆ. ಮಹೇಶ್, ಎಲ್ಲಾ ವಿಭಾಗದ ಮುಖ್ಯಸ್ಥರು ಮತ್ತು ಬೋಧಕ ಹಾಗು ಬೋಧಕೇತರ ಸಿಬ್ಬಂದಿ ವರ್ಗದವರನ್ನು ಅಭಿನಂದಿಸಿದ್ದಾರೆ.

## ಇತಿಹಾಸದಲ್ಲಿ ಈ ದಿನ

### ಅಕ್ಟೋಬರ್-21

**1943:** ಭಾರತೀಯ ಸ್ವಾತಂತ್ರ್ಯ ಹೋರಾಟದ ಮಹತ್ವದ ದಿನ. ಸುಭಾಷ್ ಚಂದ್ರ ಬೋಸ್ ಅವರ ನೇತೃತ್ವದಲ್ಲಿ ಆಜಾದ್ ಹಿಂದು ಸರ್ಕಾರ ಸ್ಥಾಪಿಸಲಾಯಿತು. ಈ ಸರ್ಕಾರವು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಟದ ಸಂಕೇತವಾಗಿತ್ತು.

**1879:** ಥಾಮಸ್ ಆಲ್ವಾ ಎಡಿಸನ್ ಅವರು ವಿದ್ಯುತ್ ಬಲ್ಬ್‌ನ ಯಶಸ್ವಿ ಪರೀಕ್ಷೆ ನಡೆಸಿದರು. ಜಗತ್ತಿಗೆ ಬೆಳಕು ನೀಡಿದ ಆವಿಷ್ಕಾರದ ದಿನ.

**1959:** ಲಾಹುಲ್-ಸ್ಪಿತಿ ಪ್ರದೇಶದಲ್ಲಿ ಭಾರತ ಮತ್ತು ಚೀನಾದ ಸೈನ್ಯದ ನಡುವೆ ನಡೆದ ಘರ್ಷಣೆಯಲ್ಲಿ 10 ಭಾರತೀಯ ಯೋಧರು ಹುತಾತ್ಮರಾದರು.

**1966:** ಇಥಿಯೋಪಿಯಾದಲ್ಲಿ ಭೂಕಂಪದಿಂದ ಸಾವಿರಾರು ಮಂದಿ ಮೃತಪಟ್ಟರು.

**1983:** ಕೇರಳದಲ್ಲಿ ರಾಷ್ಟ್ರಪತಿ ಭವನದಿಂದ ಮೊದಲ ಬಾರಿಗೆ ದೂರದರ್ಶನ ಪ್ರಸಾರ ಆರಂಭವಾಯಿತು.

**ಜನನ**

**1833:** ಅಲ್ಫ್ರೆಡ್ ನೋಬೆಲ್, ಸ್ವೀಡನ್‌ನ ವಿಜ್ಞಾನಿ ಮತ್ತು ನೋಬೆಲ್ ಪ್ರಶಸಿಗಳ ಸ್ಥಾಪಕ

**1917:** ಚಿತ್ರಗುಪ್ತ, ಹಿಂದಿ ಚಲನಚಿತ್ರಗಳ ಪ್ರಸಿದ್ಧ ಸಂಗೀತ ನಿರ್ದೇಶಕ

**1956:** ಕ್ಯಾರಿ ಫಿಷರ್, ಅಮೆರಿಕದ ನಟಿ

**1978:** ಕಿಮ್ ಕಾರ್ಡಾಶಿಯನ್, ಅಮೆರಿಕದ ಮಾದರಿ ಮತ್ತು ಉದ್ಯಮಿ

**1980:** ಮ್ಯಾನುಯೆಲ್ ಅಲ್ಮುನಿಯಾ, ಸ್ಪೇನ್ ಫುಟ್ಬಾಲ್ ಗೋಲ್‌ಕೀಪರ್

**ಮರಣ**

**1969:** ಜಾಕ್ ಕೆರುಯಾಕ್, ಅಮೆರಿಕದ ಖ್ಯಾತ ಕವಿ ಮತ್ತು ಲೇಖಕ

**1984:** ಫ್ರಾನ್ಸು ವಾ ಟ್ರೂಫೋ, ಫ್ರೆಂಚ್ ಚಲನಚಿತ್ರ ನಿರ್ದೇಶಕ

**1994:** ಬರ್ಕ್ ವೈಟ್, ಪ್ರಸಿದ್ಧ ಅಮೆರಿಕನ್ ಸಂಗೀತಗಾರ

**2015:** ಸಿವಿ ವಿಜಯಕುಮಾರ್, ಮಲಯಾಳಂ ಚಿತ್ರನಟ

## ಕಟ್ಟೆಮನೆ ಸೇವಾ ಪ್ರತಿಷ್ಠಾನದಿಂದ ರಕ್ತದಾನ ಶಿಬಿರ ಯಶಸ್ವಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಣ್ಣೀರುಹಳ್ಳದ ಕಟ್ಟೆಮನೆ ಸೇವಾ ಪ್ರತಿಷ್ಠಾನದಿಂದ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಕಟ್ಟೆಮನೆ ಸದಸ್ಯರಾದ ದಿ. ಶಿವರುದ್ರಯ್ಯ, ನಾರಾಯಣ, ಸಿದ್ದಲಿಂಗಪ್ಪ ಅವರ ಸ್ಮರಣಾರ್ಥ ಪ್ರತಿವರ್ಷ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗುತ್ತದೆ. ಕಾರ್ಯಕ್ರಮ ಅಂಗವಾಗಿ ತಣ್ಣೀರುಹಳ್ಳ ಬಡಾವಣೆಯ ಪ್ರಮುಖ ಬೀದಿಗಳಲ್ಲಿ ರಕ್ತದಾನ ಮಹತ್ವದ ಕುರಿತು ಜಾಗೃತಿ ಮೂಡಿಸಲಾಯಿತು. ಕಟ್ಟೆಮನೆ ಸದಸ್ಯರು ಹಾಗೂ ಬಂಧು ಮಿತ್ರರು ಸೇರಿ 30 ಮಂದಿ ರಕ್ತದಾನ ಮಾಡಿದರು.

ಕಟ್ಟೆಮನೆ ಸೇವಾ ಪ್ರತಿಷ್ಠಾನದ ಜ್ಞಾನೇಶ್ವರ, ಲಕ್ಷ್ಮೀಕಾಂತ್, ಮೋಹನಕುಮಾರ್, ಧರ್ಮಪ್ರಕಾಶ್ ಚಂದನ್, ಗೀತಾ ನಂದಕಿಶೋರ್, ಶೈಲಾ ಭಾನುಪ್ರಕಾಶ್, ರಶ್ಮಿತಾ ಪ್ರದೀಪ್ ಇತರರಿದ್ದರು.

## ಕಾರಿನಲ್ಲಿ ಹಸುಗಳ ಅಕ್ರಮ ಸಾಗಾಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಜನರನ್ನು ಹೊತ್ತೊಯ್ಯುವ ಕಾರಿನಲ್ಲಿ ಅಕ್ರಮವಾಗಿ ಗೋವು ಸಾಗಿಸುತ್ತಿದ್ದ ಪ್ರಕರಣ ಬೇಧಿಸಿರುವ ಹಿಂದೂಪರ ಸಂಘಟನೆ ಕಾರ್ಯಕರ್ತರು ನಾಲ್ಕು ಹಸುಗಳನ್ನು ರಕ್ಷಿಸಿದ್ದಾರೆ. ತಾಲ್ಲೂಕಿನ ಮಾರನಹಳ್ಳಿ ಸಮೀಪ ಭಾನುವಾರ ಬೆಳಿಗ್ಗೆ 5.30ರ ಸಮಯದಲ್ಲಿ ಕಾರನ್ನು ಬೆನ್ನಟ್ಟಿದಾಗ ಚಾಲಕನು ವಿದ್ಯುತ್ ಕಂಬಕ್ಕೆ ಡಿಕ್ಕಿ ಮಾಡಿ ಅಲ್ಲಿಂದ ಪರಾರಿಯಾಗಿದ್ದಾನೆ.

## ಅಭಿವೃದ್ಧಿಗೆ ಸಹಕರಿಸಿದವರ ಶ್ಲಾಘಿಸುವುದು ತಪ್ಪಲ್ಲ: ಜಿಟಿಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನನ್ನ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ನೀಡುವ ಯಾವುದೇ ಪಕ್ಷದ ಮುಖ್ಯಮಂತ್ರಿ ಹಾಗೂ ಸಚಿವರನ್ನು ನಾನು ಶ್ಲಾಘಿಸುತ್ತೇನೆ. ಅದರಲ್ಲಿ ನನಗೆ ಯಾವ ಲೋಪವು ಕಂಡುಬರುವುದಿಲ್ಲ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಹೇಳಿದ್ದು ಜೆಡಿಎಸ್‌ಗೆ ತಿರುಗೇಟು ನೀಡಿದ್ದಾರೆ.

ಹಾಸನಾಂಬ ದರ್ಶನ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಜೆಡಿಎಸ್ ತಮ್ಮನ್ನು ಕಡೆಗಣಿಸುತ್ತಿದೆ ಎಂಬ ಆರೋಪಗಳಿಗೆ ಈ ರೀತಿ ಉತ್ತರಿಸಿದರು. ಸದ್ಯ ನಾನು ಜೆಡಿಎಸ್ ಪಕ್ಷದಲ್ಲೇ ಇದ್ದು ಮುಂದೆ ಯಾವ ನಿರ್ಧಾರ ಕೈಗೊಳ್ಳಬೇಕೆಂಬುದರ ಕುರಿತು ಕ್ಷೇತ್ರದ ಜನರ ಜೊತೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇನೆ, ನನಗೆ ಕ್ಷೇತ್ರದ ಜನರೇ ಹೈಕಮಾಂಡ್, ಅವರೇ ವರಿಷ್ಠರು ಎಂದರು.

ಕೋರ್ ಕಮಿಟಿ ಅಧ್ಯಕ್ಷರಾಗಿ ಸುರೇಶ್‌ಬಾಬು ಅಥವಾ ಬಂಡೆಪ್ಪ ಕಾಂಶಪೂರ್ ಅಧ್ಯಕ್ಷರಾಗಲಿ ಎಂದಿದ್ದೆ. ಶಾಸಕಾಂಗ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ನನ್ನನ್ನು ಪರಿಗಣಿಸುತ್ತಾರೆಂದು ಭಾವಿಸಿದ್ದೆ. ಸುರೇಶ್‌ಬಾಬು ಅವರನ್ನು ಶಾಸಕಾಂಗ ಪಕ್ಷದ ಅಧ್ಯಕ್ಷನನ್ನಾಗಿ ಮಾಡಿದರು. ಅದರಿಂದ ನನಗೆ ಬೇಸರವಿಲ್ಲ. ಆದರೆ ನನ್ನನ್ನು ಕಡೆಗಣಿಸಿರುವುದು ಏಕೆಂಬ ಪ್ರಶ್ನೆಗೆ ಉತ್ತರ ಸಿಗಲಿಲ್ಲ ಎಂದರು.



ನಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ ಯಾವುದೇ ಪಕ್ಷದ ಮುಖ್ಯಮಂತ್ರಿಯಾದರೂ ಶ್ಲಾಘಿಸುತ್ತೇನೆ. ಪಕ್ಷದ ವಿಚಾರ ಬಂದಾಗ ಯಾವತ್ತೂ ದ್ರೋಹ ಬಗೆದಿಲ್ಲ. ಬಿ.ಎಸ್.ಯಡಿಯೂರಪ್ಪ ಅವರಿಗೆ ಅಧಿಕಾರ ಬಿಟ್ಟುಕೊಡದೆ ಇದ್ದಾಗ ಬೇಸತ್ತು ಪಕ್ಷ ತ್ಯಜಿಸಿದ್ದೆ. ಆದರೆ ಹೆಚ್.ಡಿ.ಕುಮಾರಸ್ವಾಮಿ ಅವರು ಮತ್ತೆ ಆಹ್ವಾನಿಸಿದಾಗ ಜೆಡಿಎಸ್ ಸೇರಿ ಮೈಸೂರಿನ ನಾಲ್ಕೈದು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಾಯಿತು. ಕಾಂಗ್ರೆಸ್ ಜೊತೆ ಸಮ್ಮಿಶ್ರ ಸರ್ಕಾರ ಮಾಡಿದಾಗ ಕಾಂಗ್ರೆಸ್‌ನ ಹೈಕಮಾಂಡ್ ಜಿಲ್ಲಾ ಉಸ್ತುವಾರಿ, ಯಾವ ಖಾತೆ ಬೇಕೆಂದು ಕೇಳಿದ್ದರು. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರೇ ಮನೆಗೆ ಬಂದಿದ್ದರಿಂದ ಪಕ್ಷ ಬಿಡುವ ಪ್ರಶ್ನೆ ಉದ್ಭವಿಸಲಿಲ್ಲ. 2023ರ ಚುನಾವಣೆಯ ಕಾಂಗ್ರೆಸ್ ಹೊಡೆತದಲ್ಲಿ ನಾನು ನನ್ನ ಮಗ ಎಷ್ಟು ಕಷ್ಟಪಟ್ಟು ಗೆದ್ದಿದ್ದೇವೆಂಬುದು ನಮಗೆ ಮಾತ್ರ ಗೊತ್ತು. ಆರ್ಥಿಕ ವ್ಯವಸ್ಥೆ ಇಲ್ಲದೆ ಕಷ್ಟಪಟ್ಟು ಗೆದ್ದಿದ್ದೇವೆ ಎಂದರು.

ಇವತ್ತು ನಮ್ಮ ಪಕ್ಷ ಅಧಿಕಾರಲಿಲ್ಲ. ಆದರೂ ಕ್ಷೇತ್ರದ ಕೆಲಸ ಮಾಡುತ್ತಿದ್ದೇನೆ. ಮುಂದೆ ಕ್ಷೇತ್ರದ ಜನರು ಏನು ಹೇಳುತ್ತಾರೋ ಹಾಗೆಯೇ ಕೇಳುತ್ತೇನೆ. ಜೆಡಿಎಸ್‌ನಲ್ಲೇ ಮುಂದುವರಿಯಿರಿ ಎಂದರೆ ಅದಕ್ಕೂ ಸೈ, ವಯಸ್ಸಾಗಿದೆ ರಾಜಕೀಯ ಬಿಟ್ಟುಬಿಡಿ ಎಂದರೆ ಅದಕ್ಕೂ ನನ್ನ ಸಹಮತವಿದೆ ಎಂದರು. ಪ್ರಸ್ತುತ ರಾಜಕೀಯ ಪರಿಸ್ಥಿತಿ ತುಂಬಾ ಬದಲಾಗಿದೆ. ನನಗೆ ಸೂಕ್ತ ಸ್ಥಾನಮಾನ ಕೊಡದ ಮೇಲೆ ಪಕ್ಷ ಸಂಘಟನೆಗಾಗಿ ನಾನ್ಯಾಕೆ ರಾಜ್ಯ ಪ್ರವಾಸ ಮಾಡಬೇಕು. ಬೇರೆಯವರು ರಾಜ್ಯ ಸುತ್ತಾಟ ಮಾಡುತ್ತಾರೆ ಮಂತ್ರಿಯೂ ಆಗುತ್ತಾರೆ. ಪ್ರಸ್ತುತ ಜೆಡಿಎಸ್ ಶಾಸಕನಾಗಿದ್ದು ಭವಿಷ್ಯದ ಬಗ್ಗೆ ಈಗಲೇ ಏನನ್ನೂ ಹೇಳಲು ಸಾಧ್ಯವಿಲ್ಲ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248